SRI V. M. KUSHNOOR.—I have already assured that as soon as I get the firm commitment from the banks, I am going to place orders for the machineries.

ಶ್ರೀ ಕೆ. ರಾಮಭಟ್.—ಮಾನ್ಯ ಮಂತ್ರಿಗಳು ಒಂದು ಮಾತನ್ನು ಹೇಳಿದ್ದಾರೆ. ಏನೆಂದರೆ, ಅವರು ನ್ಯಾಷನಲೈಸ್ಡ್ ಬ್ಯಾಂಕ್‌ನವರನ್ನು ಸಂಪರ್ಕಿಸಿದ್ದಾರೆಂದು ಈ ರೀತಿಯಾಗಿ ಅವರನ್ನು ಸಂಪರ್ಕ ಮಾಡಿದ್ದು ಯಾವಾಗ? ಏಕೆಂದರೆ, ಇದು ಬಹಳ ದಿವಸವಾಯಿತು. ನಾವೂ ಸಹ ಬಹಳ ಆತುರದಲ್ಲಿದ್ದೇವೆ. ಆದ್ದರಿಂದ ತಾವು ಯಾವಾಗ ಇವರೊಂದಿಗೆ ಸಂಪರ್ಕ ಬೆಳಸಿದ್ದೀರಿ ಎನ್ನುವುದನ್ನು ತಿಳಿಸುತ್ತೀರಾ ?

SRI V. M. KUSHNOOR.—The Chairman was with me yesterday. Before one month also. I had asked him to get the firm commitment from the Bank. Yesterday, he said that he would bring the commitment as soon as possible. As soon as he brings that commitment from the Banks, I am going to place orders for the machineries.

1-30 P.M.

Providing work to agriculturists and labourers in Bijapur Taluk.

893. SRI B B. PATIL (Tikota).— Will the Minister for Revenue be pleased to state.—

(*a*) whether it has come to the notice of the Government that near scarcity conditions are prevailing in Bijapur taluk of Bijapur district, due to lack of rains;

(*b*) if so, the action the Government propose to take to provide work to the suffering agriculturists and landless labourers in Bijapur taluk;

(*c*) if not, the reasons therefor ?

SRI B. BASAVALINGAPPA (Minister for Revenue).—

(*a*) There were signs of near scarcity conditions during the last week of June 1978.

(*b*) and (*c*) The present situation does not warrant taking up relief works on account of rainfall during July 1978 and also because of the Departmental works which are already in progress.

ಶ್ರೀ ಬಿ. ಬಿ. ಪಾಟೀಲ್.— ಸ್ವಾಮಿ ನನ್ನ (ಅ) ಮತ್ತು (ಇ) ಪ್ರಶ್ನೆಗಳಿಗೆ ಉತ್ತರಿಸುತ್ತಾ, ೧೯೭೮ನೇ ಜುಲೈ ತಿಂಗಳಲ್ಲಿ ಮಳೆ ಬಿದ್ದಿರುವುದರಿಂದಾಗಿ ಹಾಗೂ ಇಲಾಖೆಯ ಕಾಮಗಾರಿಗಳು ಈಗಾಗಲೇ ಪ್ರಗತಿಯಲ್ಲಿರುವುದರಿಂದಾಗಿ ಪರಿಹಾರ ಕಾಮಗಾರಿಗಳನ್ನು ಸಧ್ಯದ ಪರಿಸ್ಥಿತಿಯಲ್ಲಿ ಕೈಕೊಳ್ಳುವ ವಿಷಯ ಉದ್ಭವಿಸುವುದಿಲ್ಲ, ಎಂದು ಹೇಳಿದ್ದೀರಿ. ಈ ಮಳೆ ತಡವಾಗಿ ಬಿದ್ದಿರುವುದರಿಂದ ಅಲ್ಲಿಯ ಜನರು ಜೀವನ ಮಾಡುವುದಕ್ಕೆ ಬಹಳ ತೊಂದರೆಯಾಗಿದೆ. ಆದುದರಿಂದ ಅವರಿಗೆ ಅನುಕೂಲ ಮಾಡಿಕೊಡುವ ದೃಷ್ಟಿಯಿಂದ ಪರಿಹಾರ ಕಾಮಗಾರಿಗಳನ್ನು ಏನಾದರೂ ತೆಗೆದುಕೊಳ್ಳುತ್ತೀರಾ ಎಂದು ತಮ್ಮನ್ನು ಕೇಳಬಯಸುತ್ತೇನೆ.

† ಶ್ರೀ ಬಿ. ಬಸವಲಿಂಗಪ್ಪ.— ಈಗ ಸಧ್ಯಕ್ಕೆ ಇಲಾಖೆಯಂ ಮುಖಾಂತರ ಪರಿಹಾರ ಕಾಮಗಾರಿಗಳನ್ನು ಪ್ರಾರಂಭ ಮಾಡುವ ಅವಶ್ಯಕತೆ ಏನೂ ಇಲ್ಲ. ಆದರೂ ಕೂಡ ನಾವು ಈ ವಿಷಯವನ್ನು ಬಹಳ ಸೂಕ್ಷ್ಮವಾಗಿ ಅವಲೋಕಿಸುತ್ತಿದ್ದೇವೆ. ಒಂದು ವೇಳೆ ಎಲ್ಲೆಲ್ಲಿ ಈ ಅಭಾವ ಪರಿಹಾರ ಕಾಮಗಾರಿಗಳ ಅವಶ್ಯಕತೆ ಇದೆ ಎಂದು ತಿಳಿದುಬರುತ್ತದೆ ಅಂಥ ಕಡೆ ಕೆಲಸ ಪ್ರಾರಂಭಮಾಡಿಸುತ್ತೇವೆ. ಈಗ ಸಾಯಿಲ್ ಕನ್ಸರ್ವೇಷನ್ ಬಗ್ಗೆ ಬಂಡಿಂಗ್ ಕೆಲಸವನ್ನು ೩ ವರ್ಷಕ್ಕೆ ತೆಗೆದುಕೊಂಡಿದ್ದೇವೆ, ಅದರಲ್ಲಿ ಸುಮಾರು ೭೫ ಜನ ಕೆಲಸ ಮಾಡುತ್ತಿದ್ದಾರೆ. ಡಿ.ಪಿ.ಐ ರೆಗ್ಯುಲರ್ ವರ್ಕ್ಸ್‌ನಲ್ಲಿ ಸುಮಾರು ೮೫ ಜನ ಕೆಲಸ ಮಾಡುತ್ತಿದ್ದಾರೆ. ಅಫೋರ್‌ಸ್ಟೇಷನ್‌ನಲ್ಲಿ ೫ ವರ್ಷಕ್ಕೆ ಕೆಲಸ ತೆಗೆದುಕೊಂಡಿದ್ದೇವೆ. ಇದರಲ್ಲೆ ೧೬೫ ಜನ ಕೆಲಸ ಮಾಡುತ್ತಿದ್ದಾರೆ. ಮತ್ತು ಸುಮಾರು ೩೪೭ ಮ್ಯಾನ್‌ಡೇಸ್ ಮಾಡಿಕೊಂಡಿದ್ದಾರೆ. ಎಂ.ಐ. ಟ್ಯಾಂಕ್‌ನಲ್ಲಿ ೬ ಕೆಲಸವನ್ನು ತೆಗೆದುಕೊಂಡಿದ್ದೇವೆ, ಇದರಲ್ಲೂ ಕೂಡ ೧೬೫ ಜನ ಕೆಲಸ ಮಾಡುತ್ತಿದ್ದಾರೆ.

ಶ್ರೀ ಬಿ. ಬಿ. ಪಾಟೀಲ್.—ತಾವು ಡೆಪ್ಯುಟಿ ಕಮಿಷನರ್‌ರವರಿಂದ ರಿಪೋರ್ಟ್ ತರಿಸಿಕೊಳ್ಳುತ್ತೀರಿ. ಈಗ ನಾನು ತಮ್ಮನ್ನು ಕೇಳುವುದೇನೆಂದರೆ ತಮ್ಮ ಪಿ.ಡಬ್ಲ್ಯು.ಡಿ. ಇಲಾಖೆಯಿಂದ ಜನಗಳಿಗೆ ಏನಾದರೂ ಅಭಾವ ಪರಿಹಾರ ಕಾಮಗಾರಿಗಳನ್ನು ಒದಗಿಸಿಕೊಡುತ್ತೀರಾ.?

ಶ್ರೀ ಬಿ. ಬಸವಲಿಂಗಪ್ಪ.— ತಾವು ಹೇಳುವುದನ್ನು ನಾನು ಒಪ್ಪಿಕೊಳ್ಳುತ್ತೇನೆ. ಈಗ ಚೆನ್ನಾಗಿ ನಿಮ್ಮ ಭಾಗದಲ್ಲಿ ಮಳೆ ಆಗಿರುವುದರಿಂದ ಮುಂದಿನ ಸಾರಿ ಬೆಳೆ ಚೆನ್ನಾಗಿ ಆಗುತ್ತದೆ. ಆದರೂ ನಿಮ್ಮ ತಾಲ್ಲೂಕನ್ನು ಬಹಳ ಸೂಕ್ಷ್ಮವಾಗಿ ನೋಡುತ್ತಿದ್ದೇವೆ. ಅಲ್ಲದೆ ಇದಕ್ಕಾಗಿ ಒಂದು ಪ್ರತ್ಯೇಕ ಸ್ಕೀಮನ್ನೇ ತೆಗೆದುಕೂಂಡು ಬರುತ್ತಿದ್ದೇವೆ. ಆ ಸ್ಕೀಂ ಅವಶ್ಯಕತೆ ಕಂಡುಬಂದರೆ ಖಂಡಿತವಾಗಿಯೂ ನಿಮ್ಮ ಜಿಲ್ಲೆಗೆ ಪ್ರಾಧ್ಯಾನ್ಯತೆ ಕೊಡುತ್ತೇವೆ.

Cess amount collected by Agricultural Produce Market Committee, Bijapur.

894. Sri B. B. Patil (Tikota).— Will the Minister of State for Regulated Markets be pleased to state.—

(*a*) whether it has come to the notice of the Government that the cess amount collected by Agricultural Produce Market Committee, Bijapur from agriculturists is not being utilised for any developmental activities;

(*b*) if so, the purpose for which the said cess amount is collected;

(*c*) the total amount collected by Agricultural Produce Market Committee, Bijapur so far;

(*d*) whether the Government propose to give a part of the collected amount to Taluk Development Boards under its jurisdiction for developmental works;

(*e*) if not, the reasons therefor?

Sri A. B. Jakanur (Minister of State for Regulated Markets).—

(*a*) No cess is collected but market fee is collected from Sellers. It is being utilised for the construction, improvement, repair and maintenance of rural roads, in the State.